# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಸೋಮವಾರ, ೦೯, ನವೆಂಬರ್, ೨೦೨೦ (ಕಾರ್ತಿಕ, ೧೮, ಶಕವರ್ಷ, ೧೯೪೨)<br>BENGALURU, MONDAY, 09, NOVEMBER, 2020 ( Karthika, 18, SHAKAVARSHA, 1942) | ನಂ. ೫೩೪<br>No. 534 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಕಲತೆಗಳನ್ನು ಮತ್ತು ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆಗಳನ್ನು (Blindness, Locomotor disability, Cerebral palsy and other categories of benchmark disabilities) ಹೊಂದಿರುವ ಅಭ್ಯರ್ಥಿಗಳು ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಆಯ್ಕೆ ಪ್ರಾಧಿಕಾರ ನಡೆಸುವ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಲಿಪಿಕಾರರ (Scribes) ಸೇವೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

**ಓದಲಾಗಿದೆ**

1. ದಿನಾಂಕ 30.10.2007ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 74 ಸೆನೆನಿ 2006,
2. ದಿನಾಂಕ 19.11.2010ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 171 ಸೆನೆನಿ 2010,
3. ಕೇಂದ್ರ ಸರ್ಕಾರದ ದಿನಾಂಕ 29.08.2018ರ ಅಧಿಕೃತ ಜ್ಞಾಪನ ಸಂಖ್ಯೆ.ಎಫ್.ನಂ.34-02/2015-ಡಿಡಿ-III.

**ಪ್ರಸ್ತಾವನೆ:**

1. ಕರ್ನಾಟಕ ಲೋಕ ಸೇವಾ ಆಯೋಗ / ಸರ್ಕಾರದ ವಿವಿಧ ಇಲಾಖೆಗಳಲ್ಲಿ ಆಯ್ಕೆ ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಂಧ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನು ಬರೆಯಲು ಲಿಪಿಕಾರರ (Scribes) ಸೇವೆಯನ್ನು ಒದಗಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ 30.10.2007 ರ ಸರ್ಕಾರದ ಆದೇಶದಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ಅಂಧ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ ಒಂದು ಗಂಟೆಗೆ ಹತ್ತು ನಿಮಿಷಗಳ ಹೆಚ್ಚುವರಿ ಸಮಯವನ್ನು ಸಹ ನೀಡಲು ಆಸ್ಪದವನ್ನು ಕಲ್ಪಿಸಲಾಗಿರುತ್ತದೆ.

ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗೆಜೆಟೆಡ್ ಪ್ರೊಬೇಷನರುಗಳ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆಗಳಲ್ಲಿ ಚಲನವಲನ ವೈಕಲ್ಯ (Locomotor disability), ಮತ್ತು ಮೆದುಳಿನ ಪಾರ್ಶ್ವವಾಯು (Cerebral palsy) ಗೆ ಒಳಗಾದ ಅಂಗವಿಕಲ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಉತ್ತರಿಸಲು ಪ್ರತಿ ಒಂದು ಗಂಟೆ ಪರೀಕ್ಷಾವಧಿಗೆ 20 ನಿಮಿಷಗಳ ಹೆಚ್ಚುವರಿ ಸಮಯಾವಕಾಶ ನೀಡಲು ಮೇಲೆ (2)ರಲ್ಲಿ ಓದಲಾದ ದಿನಾಂಕ 19.11.2010ರ ಸರ್ಕಾರದ ಆದೇಶದಲ್ಲಿ ಆಸ್ಪದವನ್ನು ಕಲ್ಪಿಸಲಾಗಿರುತ್ತದೆ.

ಎದ್ದುಕಾಣುವ ಅಂಗವಿಕಲತೆಗಳಿಗೆ (benchmark disabilities) ಒಳಗಾದ ವ್ಯಕ್ತಿಗಳಿಗೆ ಲಿಖಿತ ಪರೀಕ್ಷೆಗಳನ್ನು ಬರೆಯುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮೇಲೆ (3)ರಲ್ಲಿ ಓದಲಾದ ದಿನಾಂಕ 29.08.2018ರ ಕಛೇರಿ ಜ್ಞಾಪನದಲ್ಲಿ ಮಾರ್ಗಸೂಚನೆಗಳನ್ನು ನೀಡಿರುತ್ತದೆ.

2. The Rights of Persons with Disabilities Act, 2016 (Central Act No.49 of 2016) [**ಸಂಕ್ಷಿಪ್ತವಾಗಿ,'2016ರ ಅಧಿನಿಯಮ'**] ರ ಕಲಂ 57 ರಲ್ಲಿ ನಿರ್ದಿಷ್ಟಪಡಿಸಿದ ಅಂಗವಿಕಲತೆಗಳನ್ನು ದೃಢೀಕರಿಸುವ ಪ್ರಾಧಿಕಾರಗಳನ್ನು ಗೊತ್ತುಪಡಿಸುವ ಅಧಿಕಾರವನ್ನು ಸಕ್ಷಮ ಸರ್ಕಾರಗಳಿಗೆ ನೀಡಲಾಗಿದ್ದು, ಅದರಲ್ಲಿ ರಾಜ್ಯ ಸರ್ಕಾರಗಳು ಸಹ ಒಳಗೊಂಡಿರುತ್ತವೆ. ಸದರಿ ಕಲಂ 57 ನ್ನು ಈ ಕೆಳಗೆ ಉದ್ಧರಿಸಿದೆ:

> ***"57. (1) The appropriate Government shall designate persons, having requisite qualifications and experience, as certifying authorities, who shall be competent to issue the certificate of disability.***
> ***(2) The appropriate Government shall also notify the jurisdiction within which and the terms and conditions subject to which, the certifying authority shall perform its certification functions."***

3. ಮೇಲೆ (3)ರಲ್ಲಿ ಓದಲಾದ ದಿನಾಂಕ 29.08.2018ರ ಕಛೇರಿ ಜ್ಞಾಪನದಲ್ಲಿ ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚನೆಗಳ ಹಿನ್ನೆಲೆಯಲ್ಲಿ, ಮೇಲೆ (1) ಮತ್ತು (2)ರಲ್ಲಿ ಓದಲಾದ ದಿನಾಂಕ: 30.10.2007 ಮತ್ತು ದಿನಾಂಕ: 19.11.2010ರ ಸರ್ಕಾರದ ಆದೇಶಗಳಲ್ಲಿ ನೀಡಲಾದ ಮಾರ್ಗಸೂಚನೆಗಳನ್ನು ಪುನರಾವಲೋಕನೆ ಮಾಡಿ ಪರಿಷ್ಕೃತ ಮಾರ್ಗಸೂಚನೆಗಳನ್ನು ಹೊರಡಿಸುವುದು ಸೂಕ್ತವೆಂದು ಮನಗಾಣಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 272 ಸೆನೆನಿ 2013**
**ಬೆಂಗಳೂರು, ದಿನಾಂಕ: 09.11.2020.**

4. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಮೇಲೆ (1) ಮತ್ತು (2) ರಲ್ಲಿ ಓದಲಾದ ದಿನಾಂಕ: 30.10.2007 ಮತ್ತು ದಿನಾಂಕ: 19.11.2010ರ ಸರ್ಕಾರದ ಆದೇಶಗಳಲ್ಲಿ ನೀಡಲಾದ

ಮಾರ್ಗಸೂಚನೆಗಳನ್ನು ಪರಿಷ್ಕರಿಸಿ ಈ ಕೆಳಕಂಡ ಮಾರ್ಗಸೂಚನೆಗಳನ್ನು ಈ ಮೂಲಕ ಗೊತ್ತುಪಡಿಸಲಾಗಿದೆ:

(1) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಆಯ್ಕೆ ಪ್ರಾಧಿಕಾರ ನಡೆಸುವ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಕಲತೆಗಳನ್ನು ಮತ್ತು ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆಗಳನ್ನು (Blindness, Locomotor disability, Cerebral palsy and other categories of benchmark disabilities) ಹೊಂದಿರುವ ಅಭ್ಯರ್ಥಿಗಳಿಗೆ ಈ ಮಾರ್ಗಸೂಚನೆಗಳು ಅನ್ವಯವಾಗುತ್ತವೆ;

(2) 2016ರ ಅಧಿನಿಯಮದ ಕಲಂ 2(r)ರಲ್ಲಿ **'ಎದ್ದುಕಾಣುವ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿ'** (Person with benchmark disability) ಎಂಬುದನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ:

> ***"(r) "person with benchmark disability" means a person with not less than forty per cent, of a specified disability where specified disability has not been defined in measurable terms and includes a person with disability where specified disability has been defined in measurable terms, as certified by the certifying authority."***

ಅಲ್ಲದೆ, 2016ರ ಅಧಿನಿಯಮದ ಕಲಂ 2 (zc) ರಲ್ಲಿ **"specified disability"** ಎಂಬುದನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ:

> ***"(zc) "specified disability" means the disabilities as specified in the Schedule."***

(3) 2016 ರ ಅಧಿನಿಯಮದ ಕಲಂ 2 (ಆರ್) ಅಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಯಾವುದೇ ಅಭ್ಯರ್ಥಿಯು ಬರವಣಿಗೆಯ ವೇಗವನ್ನು ಒಳಗೊಂಡಂತೆ ಬರವಣಿಗೆಯಲ್ಲಿ ಯಾವುದೇ ಅಸಮರ್ಥತೆಯನ್ನು ಹೊಂದಿದ್ದು, ಲಿಪಿಕಾರರ ಸೌಲಭ್ಯವನ್ನು ಒದಗಿಸಬೇಕೆಂದು ಆತ ಇಚ್ಛೆಪಟ್ಟಲ್ಲಿ, ಆ ಸೌಲಭ್ಯವನ್ನು ಆತನಿಗೆ ನೀಡತಕ್ಕದ್ದು;

(4) ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ (ಎರಡೂ ತೋಳುಗಳು ಪೀಡಿತಗೊಂಡಂತಹ-BA) ಮತ್ತು ಮೆದುಳಿನ ಪಾರ್ಶ್ವವಾಯು - ಈ ಎದ್ದುಕಾಣುವ ಅಂಗವಿಕಲತೆಯೊಂದನ್ನು ಹೊಂದಿರುವ ಅಭ್ಯರ್ಥಿಯು ಇಚ್ಛೆಪಟ್ಟಲ್ಲಿ, ಆತನಿಗೆ ಲಿಪಿಕಾರರ ಸೌಲಭ್ಯವನ್ನು ಒದಗಿಸತಕ್ಕದ್ದು;

(5) ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆ ಹೊಂದಿದ ಅಭ್ಯರ್ಥಿಗಳ ಪ್ರಕರಣಗಳಲ್ಲಿ **ಅನುಬಂಧ-I** ರ ನಮೂನೆಯಲ್ಲಿ ಸಂಬಂಧಿಸಿದ ಅಭ್ಯರ್ಥಿಯು ಬರೆಯಲು ದೈಹಿಕ

ಅಸಮರ್ಥತೆ ಹೊಂದಿದ್ದಾನೆ ಎಂದು ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರವನ್ನು ಪಡೆದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಲಿಪಿಕಾರರ ಸೌಲಭ್ಯವನ್ನು ಒದಗಿಸತಕ್ಕದ್ದು.;

(6) ಅಭ್ಯರ್ಥಿಯು ತನ್ನ ಸ್ವತಃ ಲಿಪಿಕಾರನನ್ನು ಕರೆತರುವ ಅವಕಾಶ ಕಲ್ಪಿಸಬೇಕು ಅಥವಾ ಲಿಪಿಕಾರರ ಸೇವೆಯನ್ನು ಒದಗಿಸಲು ಆಯ್ಕೆ ಪ್ರಾಧಿಕಾರ / ಆಯೋಗವನ್ನು ಕೋರಲು ಅವಕಾಶವಿರಬೇಕು. ಪರೀಕ್ಷೆಗಳ ಅವಶ್ಯಕತೆಯ ಅನುಸಾರ ಆಯ್ಕೆ ಪ್ರಾಧಿಕಾರ / ಆಯೋಗವು, ಜಿಲ್ಲಾ / ವಿಭಾಗ / ರಾಜ್ಯ ಮಟ್ಟದಲ್ಲಿ ಲಿಪಿಕಾರರನ್ನು ಗುರುತಿಸಿ ಅವರ ಹೆಸರುಗಳ ಪಟ್ಟಿಗಳನ್ನು ತಯಾರಿಸಬಹುದು. ಅಂತಹ ಸಂದರ್ಭದಲ್ಲಿ ಅಭ್ಯರ್ಥಿಯು ತನಗೆ ಒದಗಿಸಲಿರುವ ಲಿಪಿಕಾರನು ಅರ್ಹನೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಅನುವಾಗುವಂತೆ ಪರೀಕ್ಷೆಗೆ ಎರಡು ದಿನಗಳ ಮೊದಲೇ ಲಿಪಿಕಾರನನ್ನು ಭೇಟಿ ಮಾಡಲು ಅಭ್ಯರ್ಥಿಗೆ ಅವಕಾಶ ಕಲ್ಪಿಸಬೇಕು;

(7) ಲಿಪಿಕಾರನನ್ನು ಒದಗಿಸಿದಲ್ಲಿ, ಆತನ ವಿದ್ಯಾರ್ಹತೆಯು ಪರೀಕ್ಷೆಗೆ ನಿಗದಿಪಡಿಸಿರುವ ಕನಿಷ್ಟ ವಿದ್ಯಾರ್ಹತೆಗಿಂತ ಹೆಚ್ಚಿರಬಾರದು ಎಂದು ಆಯ್ಕೆ ಪ್ರಾಧಿಕಾರ/ಆಯೋಗವು ಖಚಿತಪಡಿಸಿಕೊಳ್ಳಬೇಕು. ಆದಾಗ್ಯೂ, ಲಿಪಿಕಾರನು ಹೊಂದಿರುವ ವಿದ್ಯಾರ್ಹತೆಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಗಿಂತ ಕಡಿಮೆ ಇರತಕ್ಕದ್ದಲ್ಲ. ಆದರೆ, ತನ್ನದೇ ಆದ ಲಿಪಿಕಾರನನ್ನು ಕರೆತರಲು ಅಭ್ಯರ್ಥಿಗೆ ಅವಕಾಶ ಕಲ್ಪಿಸಿದಲ್ಲಿ, ಅಂತಹ ಲಿಪಿಕಾರನು ಹೊಂದಿರುವ ವಿದ್ಯಾರ್ಹತೆಯು, ಸದರಿ ಅಭ್ಯರ್ಥಿಯು ಹೊಂದಿರುವ ವಿದ್ಯಾರ್ಹತೆಗಿಂತ ಒಂದು ಹಂತ ಕೆಳಗಿರಬೇಕು. ಅಭ್ಯರ್ಥಿಯು ತನ್ನದೇ ಆದ ಲಿಪಿಕಾರರ ಸೇವೆಯನ್ನು ಪಡೆಯುವ ಸಂದರ್ಭದಲ್ಲಿ **ಅನುಬಂಧ-2** ರ ನಮೂನೆಯಲ್ಲಿ ಲಿಪಿಕಾರನ ವಿವರಗಳನ್ನು ಸಲ್ಲಿಸತಕ್ಕದ್ದು;

(8) ತುರ್ತು ಸಂದರ್ಭದಲ್ಲಿ ಲಿಪಿಕಾರನನ್ನು ಬದಲಾಯಿಸಲು ಅವಕಾಶ ನೀಡಬೇಕು. ಬೇರೆ ಬೇರೆ ಉತ್ತರ ಪತ್ರಿಕೆಗಳನ್ನು ಬರೆಯಲು, ಅದರಲ್ಲಿಯೂ ಮುಖ್ಯವಾಗಿ ವಿವಿಧ ಭಾಷಾ ಉತ್ತರ ಪತ್ರಿಕೆಗಳನ್ನು ಬರೆಯಲು, ಒಂದಕ್ಕಿಂತ ಹೆಚ್ಚು ಲಿಪಿಕಾರರ ಸೇವೆಯನ್ನು ಪಡೆದುಕೊಳ್ಳಲು ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕು. ಆದರೆ, ಒಂದು ವಿಷಯಕ್ಕೆ ಕೇವಲ ಓರ್ವ ಲಿಪಿಕಾರನು ಇರತಕ್ಕದ್ದು;

(9) ನೇರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಪ್ರಾಧಿಕಾರಗಳು ತಂತ್ರಜ್ಞಾನವನ್ನು ಬಳಸಿ ಪ್ರಶ್ನೆ ಪತ್ರಿಕೆಗಳನ್ನು ದೊಡ್ಡ ಪ್ರಿಂಟುಗಳಲ್ಲಿ (large prints) ಅಥವಾ ಇ-ಪಠ್ಯ (e-text)ದಲ್ಲಿ ಪರಿವರ್ತಿಸಲು ಮತ್ತು ಸಾಧ್ಯವಿದ್ದಷ್ಟು ಮಟ್ಟಿಗೆ ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನು ಬರೆಯುವ ವಿಧಾನವನ್ನು, ಅಂದರೆ, ಕಂಪ್ಯೂಟರ್‌ನಲ್ಲಿ ಅಥವಾ ದೊಡ್ಡ ಪ್ರಿಂಟುಗಳಲ್ಲಿ ಅಥವಾ ಉತ್ತರಗಳನ್ನು ದಾಖಲಿಸಲು (by recording the answers) ಅವಕಾಶ ಕಲ್ಪಿಸಿಕೊಡತಕ್ಕದ್ದು

(10) ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುಮತಿಸಿದಲ್ಲಿ, ಸಾಫ್ಟ್‌ವೇರ್ ಅಥವಾ ಸಿಸ್ಟಂನಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ ಸರಿಪಡಿಸಲು ಅನುಕೂಲವಾಗುವಂತೆ ಅವರುಗಳು ಕಂಪ್ಯೂಟರ್ ಅನ್ನು ಒಂದು ದಿನ ಮುಂಚಿತವಾಗಿ ಪರೀಕ್ಷಿಸಲು ಅವಕಾಶ ನೀಡತಕ್ಕದ್ದು. ಪರೀಕ್ಷೆಯನ್ನು ತೆಗೆದುಕೊಳ್ಳಲು ಸ್ವಂತ ಗಣಕಯಂತ್ರ / ಲ್ಯಾಪ್‌ಟಾಪ್ ಬಳಕೆಯನ್ನು ಅನುಮತಿಸತಕ್ಕದ್ದಲ್ಲ. ಆದಾಗ್ಯೂ, ಗಣಕಯಂತ್ರ ಆಧಾರಿತ ಪರೀಕ್ಷೆಗಳಿಗಾಗಿ ಅನುಕೂಲಕರವಾದ ಪರಿಕರಗಳಾದ ಕೀಬೋರ್ಡ್, ಕಸ್ಟಮೈಸ್ಡ್ ಮೌಸ್ ಇತ್ಯಾದಿಗಳ ಬಳಕೆಯನ್ನು ಅನುಮತಿಸಬೇಕು;

(11) 2016ರ ಅಧಿನಿಯಮದಲ್ಲಿ ಗೊತ್ತುಪಡಿಸಿದಂತೆ ಎದ್ದುಕಾಣುವ ಅಂಗವಿಕಲತೆ (benchmark disability) ಅಥವಾ ನಿರ್ದಿಷ್ಟಪಡಿಸಿದ ಅಂಗವಿಕಲತೆ (specified disability) ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ, ಇತರೆ ಅಗತ್ಯ ದಾಖಲೆಗಳೊಂದಿಗೆ, ಅಂಗವಿಕಲತೆಗೆ ಸಂಬಂಧಿಸಿದ ಮೀಸಲಾತಿಯನ್ನು ಕೋರಿ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಪರೀಕ್ಷೆಯನ್ನು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುತ್ತೇನೆಂದು ಭಾವಿಸಿದಲ್ಲಿ, ಮೇಲ್ಕಂಡಂತೆ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ, ಪರೀಕ್ಷೆಯನ್ನು ಬರೆಯಲು ಅವನು ದೈಹಿಕ ಅಸಮರ್ಥತೆ ಹೊಂದಿದ್ದಾನೆ ಎಂದು ವೈದ್ಯಕೀಯ ಮಂಡಳಿಯಿಂದ, ಮೇಲಿನ ಉಪಕಂಡಿಕೆ (5)ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ **(ಅನುಬಂಧ-I)** ಪ್ರಮಾಣ ಪತ್ರವನ್ನು ಸಹ ಪಡೆದು ಅರ್ಜಿಯ ಜೊತೆಗೆ ಒದಗಿಸತಕ್ಕದ್ದು;

(12) ಮೇಲೆ ವಿವರಿಸಿದಂತೆ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ನೇರ ನೇಮಕಾತಿ ಬಯಸಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಂಗವಿಕಲತೆ ಪ್ರಮಾಣ ಪತ್ರದ ಜೊತೆಗೆ, ತಮಗೆ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಲಿಪಿಕಾರನ ಅವಶ್ಯಕತೆ ಇದೆಯೇ ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಈ ಉದ್ದೇಶಕ್ಕಾಗಿ, ಮೇಲಿನ ಉಪಕಂಡಿಕೆ (5) ರಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರ ಮತ್ತು ಉಪಕಂಡಿಕೆ (7) ರಲ್ಲಿ ಉಲ್ಲೇಖಿಸಲಾದ ಮುಚ್ಚಳಿಕೆ ಪತ್ರದ ನಮೂನೆಗಳಲ್ಲಿ ನೀಡತಕ್ಕದ್ದು. ಲಿಪಿಕಾರನ ಅವಶ್ಯಕತೆ ಇದ್ದಲ್ಲಿ, ಲಿಪಿಕಾರನ ವಿವರಗಳನ್ನು ಆ ಮುಚ್ಚಳಿಕೆ ಪತ್ರದ ನಮೂನೆಯಲ್ಲಿ ನೀಡತಕ್ಕದ್ದು.;

(13) ಲಿಪಿಕಾರರ ಸೇವೆಯನ್ನು ಪಡೆಯಲು ಅನುಮತಿಸಲಾದ ಅಭ್ಯರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷಗಳ ಪರಿಹಾರ ಸಮಯವನ್ನು ನೀಡತಕ್ಕದ್ದು. ಲಿಪಿಕಾರನ ಸೌಲಭ್ಯವನ್ನು ಪಡೆಯದಿರುವ, ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳಿಗೆ ಮೂರು ಗಂಟೆಗಳ ಅವಧಿಯ ಪರೀಕ್ಷೆಗಾಗಿ ಒಂದು ಗಂಟೆಯ ಹೆಚ್ಚುವರಿ ಸಮಯವನ್ನು

ಅನುಮತಿಸಬಹುದು. ಪರೀಕ್ಷಾ ಅವಧಿಯು ಒಂದು ಗಂಟೆಗಿಂತ ಕಡಿಮೆ ಇದ್ದಲ್ಲಿ ಈ ಹೆಚ್ಚುವರಿ ಸಮಯದ ಅವಧಿಯನ್ನು ಅದೇ ಪ್ರಮಾಣದ ಆಧಾರದ ಮೇಲೆ (on Pro-rata basis) ಅನುಮತಿಸಬೇಕು. ಹೆಚ್ಚುವರಿ ಸಮಯವು ಐದು ನಿಮಿಷಗಳಿಗಿಂತ ಕಡಿಮೆಯಿರಬಾರದು ಮತ್ತು ಐದರ ಗುಣಕದಲ್ಲಿ (in multiples of five) ಇರಬೇಕು;

(14) ಪರೀಕ್ಷಾ ದಿನದಂದು ಪರೀಕ್ಷೆಯ ಪ್ರಾರಂಭಕ್ಕೆ ಮುಂಚೆ ಗೊಂದಲ ಮತ್ತು ವಿಚಲಿತತೆಯನ್ನು ತಪ್ಪಿಸಲು ನೆಲಮಹಡಿಯಲ್ಲಿ ಪ್ರಾಶಸ್ತ್ಯ ಕೊಟ್ಟು ಸರಿಯಾದ ಆಸನ ವ್ಯವಸ್ಥೆಯನ್ನು ಮಾಡಬೇಕು. ಪ್ರಶ್ನೆ ಪತ್ರಿಕೆಗಳನ್ನು ನೀಡಿದ ಸಮಯವನ್ನು ನಿಖರವಾಗಿ ಗುರುತಿಸಬೇಕು ಮತ್ತು ಪೂರಕ ಪತ್ರಿಕೆಗಳನ್ನು ವಿಳಂಬಕ್ಕೆ ಎಡೆ ಮಾಡದಂತೆ ಸಕಾಲದಲ್ಲಿ ನೀಡುವುದನ್ನು ಖಚಿತಪಡಿಸಿಕೊಳ್ಳಬೇಕು;

(15) ಅಭ್ಯರ್ಥಿಯು ಆಯ್ಕೆ ಮಾಡಿಕೊಂಡ ಲಿಪಿಕಾರನಿಗೆ ಆಯೋಗದಿಂದ/ ಆಯ್ಕೆ ಪ್ರಾಧಿಕಾರದಿಂದ ಒಂದು ಪ್ರವೇಶ ಪತ್ರವನ್ನು ನೀಡತಕ್ಕದ್ದು. ಅದರಲ್ಲಿ ಲಿಪಿಕಾರನ ವಿವರಗಳು ಹಾಗೂ ಭಾವಚಿತ್ರವಿರತಕ್ಕದ್ದು;

(16) ಅಭ್ಯರ್ಥಿಯು ಸ್ವತ: ಕರೆತರುವ ಲಿಪಿಕಾರನ ದುರ್ನಡತೆಗೆ ಅಭ್ಯರ್ಥಿಯೇ ಜವಾಬ್ದಾರನಾಗಿರುತ್ತಾನೆ;

(17) ಲಿಪಿಕಾರ ಹಾಗೂ ಅಭ್ಯರ್ಥಿಯ ನಡುವೆ ನಡೆಯುವ ಸಂವಾದವು ಪರೀಕ್ಷಾ ಕೊಠಡಿಯಲ್ಲಿನ ಶಾಂತಿಗೆ ಭಂಗ ತರಬಾರದು ಅಥವಾ ಅದೇ ಕೊಠಡಿಯಲ್ಲಿರುವ ಇತರೆ ಅಭ್ಯರ್ಥಿಗಳಿಗೆ ತೊಂದರೆ ಉಂಟು ಮಾಡುವಂತಿರಬಾರದು;

(18) ವೈದ್ಯಕೀಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿ ಯಾವುದೇ ಪ್ರಯಾಣ ಭತ್ಯೆ / ದಿನಭತ್ಯೆ ಪಡೆಯಲು ಅರ್ಹನಾಗಿರುವುದಿಲ್ಲ.

5. ಸಂಬಂಧಪಟ್ಟ ಆಯ್ಕೆ ಪ್ರಾಧಿಕಾರಗಳು / ಕರ್ನಾಟಕ ಲೋಕಸೇವಾ ಆಯೋಗವು ಮೇಲ್ಕಂಡ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ವಿ ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-2).

# *ಅನುಬಂಧ-1*

## ಅಭ್ಯರ್ಥಿಯು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರ

ಈ ವೈದ್ಯಕೀಯ ಮಂಡಳಿಯು ______________________ (ಅಂಗವೈಕಲ್ಯ ಪ್ರಮಾಣ ಪತ್ರದಲ್ಲಿ ದಾಖಲಿಸಲಾಗಿರುವ ಅಂಗವೈಕಲ್ಯತೆಯ ಸ್ವರೂಪ ಮತ್ತು ಪ್ರತಿಶತ ಪ್ರಮಾಣ) ಅಂಗವೈಕಲ್ಯವನ್ನು ಹೊಂದಿರುವ ಶ್ರೀ/ಶ್ರೀಮತಿ/ಕುಮಾರಿ ______________ (ಅಂಗವಿಕಲ ಅಭ್ಯರ್ಥಿಯ ಹೆಸರು) ______________________ ಇವರ ಮಗ/ ಮಗಳು ________________ (ಗ್ರಾಮ, ತಾಲ್ಲೂಕು, ಜಿಲ್ಲೆ) ಇಲ್ಲಿನ ನಿವಾಸಿ ಇವರನ್ನು ಪರೀಕ್ಷಿಸಿದ್ದು, ಇವರ ಅಂಗವೈಕಲ್ಯತೆಯು ಇವರ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೈಹಿಕ ಅಸಮರ್ಥತೆಯಾಗಿದೆ ಎಂದು ಪ್ರಮಾಣೀಕರಿಸುತ್ತದೆ.

(ಸಹಿ)

ಅಧ್ಯಕ್ಷರು ಮತ್ತು ಸದಸ್ಯರು, ವೈದ್ಯಕೀಯ ಮಂಡಳಿ

ಸ್ಥಳ:

ದಿನಾಂಕ:

**ಟಿಪ್ಪಣಿ:**

1. ವೈದ್ಯಕೀಯ ಮಂಡಳಿಯ ಸ್ಥಳ ವಿವರಗಳೊಂದಿಗೆ, ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಹೆಸರು ಮತ್ತು ಹುದ್ದೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
2. ಅಭ್ಯರ್ಥಿಯು ಹೊಂದಿರುವ ಅಂಗವೈಕಲ್ಯಕ್ಕೆ ಸಂಬಂಧಿಸಿದ ತಜ್ಞ ವೈದ್ಯರೊಬ್ಬರು ಆಯಾಯಾ ಮಂಡಳಿಯ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

Licensed to post without prepayment WPP No. 297



## ಅನುಬಂಧ-2

## ತನ್ನದೇ ಆದ ಲಿಪಿಕಾರನ ಸೇವೆಯನ್ನು ಪಡೆಯಲು ಮುಚ್ಚಳಿಕೆ ಪತ್ರ

-----------------------------------ಆದ ನಾನು ------------------------------ (ಅಂಗವೈಕಲ್ಯದ ಹೆಸರು) ಅಂಗವೈಕಲ್ಯವನ್ನು ಹೊಂದಿದ್ದು, ------------------------------ (ಪರೀಕ್ಷೆಯ ಹೆಸರು) ಪರೀಕ್ಷೆಗೆ -----------------------------------ಕ್ರಮ ಸಂಖ್ಯೆಯಲ್ಲಿ ---------------------------(ಸ್ಥಳ, ತಾಲೂಕು, ಜಿಲ್ಲೆ) ಸ್ಥಳದಲ್ಲಿನ ------------------ ಕೇಂದ್ರದಲ್ಲಿ ಹಾಜರಾಗಲಿದ್ದೇನೆ. ನಾನು------------------------------ವಿದ್ಯಾರ್ಹತೆಯನ್ನು ಹೊಂದಿರುತ್ತೇನೆ.

ಈ ಕೆಳಗೆ ಸಹಿ ಮಾಡಿರುವ ನನಗೆ ಶ್ರೀ/ ಶ್ರೀಮತಿ/ ಕುಮಾರಿ--------------------- (ಲಿಪಿಕಾರನ ಹೆಸರು) ಇವರು ಮೇಲೆ ತಿಳಿಸಲಾದ ಪರೀಕ್ಷೆಯಲ್ಲಿ ಲಿಪಿಕಾರನ ಸೇವೆಯನ್ನು ಒದಗಿಸುತ್ತಾರೆ ಎಂದು ನಾನು ಈ ಮೂಲಕ ತಿಳಿಸುತ್ತೇನೆ.

ಲಿಪಿಕಾರನ ವಿದ್ಯಾರ್ಹತೆಯು ------------------------------ಎಂದು ನಾನು ಈ ಮೂಲಕ ದೃಢೀಕರಿಸಿ ಮುಚ್ಚಳಿಕೆ ನೀಡುತ್ತೇನೆ. ಒಂದು ವೇಳೆ ಲಿಪಿಕಾರನ ವಿದ್ಯಾರ್ಹತೆಯು ಮೇಲೆ ತಿಳಿಸಲಾದ ವಿದ್ಯಾರ್ಹತೆಗಿಂದ ಹೆಚ್ಚಾಗಿರುವುದು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 272 ಸೇನೆನಿ 2013, ದಿನಾಂಕ: 09.11.2020ರ ಆದೇಶ ಭಾಗದ ಕಂಡಿಕೆ:4 ಉಪಕಂಡಿಕೆ: (7)ರಲ್ಲಿ ನಿಗದಿಪಡಿಸಿರುವುದಕ್ಕೆ ಒಳಪಡದಿರುವುದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ, ನಾನು ಈ ಪರೀಕ್ಷೆಯಲ್ಲಿ ಉತ್ತೀರ್ಣವಾದಲ್ಲಿ ಪಡೆಯಬಹುದಾದ ಹುದ್ದೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳು ನನ್ನಿಂದ ಮುಟ್ಟುಗೋಲು ಹಾಕಿಕೊಳ್ಳಲ್ಪಡುತ್ತವೆ ಎಂಬುದನ್ನು ಸ್ಪಷ್ಟವಾಗಿ ಅರಿತಿರುತ್ತೇನೆ ಹಾಗೂ ಈ ಷರತ್ತಿಗೆ ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ.

(ಅಂಗವಿಕಲ ಅಭ್ಯರ್ಥಿಯ ಸಹಿ)

ಸ್ಥಳ:

ದಿನಾಂಕ:

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE

**ದಿನಾಂಕ 11–08–2024ರಂದು ನಡೆಯುವ KUWSDB AE (CIVIL ENGINEERS)ಪರೀಕ್ಷೆ–2024 ವಿಕಲಚೇತನ ಅಭ್ಯರ್ಥಿಗಳು ಲಿಪಿಕಾರರ ಸೇವೆಯನ್ನು ಪಡೆಯುವ ಬಗ್ಗೆ ಸೂಚನೆಗಳು**

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 272 ಸೇನೆನಿ 2013 ಬೆಂಗಳೂರು, ದಿನಾಂಕ: 09–11–2020ರಂತೆ ದೃಷ್ಟಿ ಮಾಂಧ್ಯತೆ, ಚಲನ ವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಕಲತೆಗಳನ್ನು ಮತ್ತು ಇತರೆ ವರ್ಗಗಳ ಎದ್ದು ಕಾಣುವ ಅಂಗವಿಕಲತೆಗಳನ್ನು ಹೊಂದಿರುವ ಅಭ್ಯರ್ಥಿಗಳಿಗೆ ಲಿಪಿಕಾರರ ಸೌಲಭ್ಯಗಳನ್ನು ಹೊಂದಲು ಅರ್ಹತೆ ಇರುತ್ತದೆ. ಸದರಿ ಅಭ್ಯರ್ಥಿಯು ಪರೀಕ್ಷೆಯನ್ನು ಬರೆಯಲು ಸ್ವತಃ ಲಿಪಿಕಾರರನ್ನು ಕರೆತರಬಹುದು ಮತ್ತು ಅಂತಹ ಲಿಪಿಕಾರರು ವಿದ್ಯಾರ್ಹತೆ ಪದವಿಗಿಂತ ಕಡಿಮೆ ಇರಬೇಕು. ಸರ್ಕಾರದ ಉಲ್ಲೇಖಿತ ಆದೇಶದಂತೆ, ಅನುಬಂಧ –01ರಲ್ಲಿನ ನಮೂನೆಯಂತೆ ದೈಹಿಕ ಅಸಮರ್ತತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಗು ತನ್ನದೇ ಆದ ಲಿಪಿಕಾರರ ಸೇವೆಯನ್ನು ಪಡೆಯಲು ಅನುಬಂಧ–02ರಲ್ಲಿ ನಮೂನೆಯಂತೆ ಮುಚ್ಚಳಿಕೆ ಪತ್ರವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸಬೇಕು.
2. ಅಭ್ಯರ್ಥಿಗಳ ಹಿತದೃಷ್ಟಿಂದ ಉಲ್ಲೇಖಿತ ಸರ್ಕಾರದ ಆದೇಶ, ಅನುಬಂಧ–01 ಮತ್ತು 02ರಲ್ಲಿನ ನಮೂನೆಗಳನ್ನು ಈ ಕೆಳಗೆ ನೀಡಲಾಗಿದೆ ಹಾಗು ವಿಕಲಚೇತನ ಅಭ್ಯರ್ಥಿಗಳ ಪಟ್ಟಿಯನ್ನು ಲಗತ್ತಿಸಿದೆ.
3. ***ವಿಕಲಚೇತನ ಅಭ್ಯರ್ಥಿಗಳು ಮೇಲೆ ಹೇಳಲಾದ ದಾಖಲೆಗಳನ್ನು, ತಪ್ಪದೆ ಅವರಿಗೆ ಸೂಚಿಸಲಾದ ಪರೀಕ್ಷಾ ಕೇಂದ್ರದಲ್ಲಿ ತಮ್ಮ UDID ಸಂಖ್ಯೆಯ ಕಾರ್ಡ್‌ನೊಂದಿಗೆ ( ನಕಲು ಪ್ರತಿ) ಹಾಜರಾಗತಕ್ಕದ್ದು. ಪರೀಕ್ಷಾ ಕೇಂದ್ರದ ಮುಖ್ಯಸ್ತರು ದಾಖಲಾತಿಗಳನ್ನು ಪರಿಶೀಳಿಸಿ ನಿಯಮಾನುಸಾರ ಸೂಕ್ತ ವ್ಯವಸ್ತೆಯನ್ನು ಒದಗಿಸುತ್ತಾರೆ.***